# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್.ಸಿ.* 386/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ಬಿ.ಎಂ.ಶಿವಮ್ಮ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇ.ಮಾದಯ್ಯ | | **19.12.2024** |
| **ವಯಸ್ಸು** | ಃ **43** ವರ್ಷ | | |
| **ವೃತ್ತಿ** | ಃ ನಿವೃತ್ತ ಪಿ.ಎಸ್.ಐ | **ಪ್ರಾ.ಸಾ.** | ಃ **06** |
| **ವಾಸಸ್ಥಳ** | ಃ ಮಂಡ್ಯ | **ಚಾ.ಸಾ.** | ಃ **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ದಿಃ*08.09.2017* ರಿಂದ *17.11.2019* ರವರೆಗೆ ನಂಜನಗೂಡು ಸಂಚಾರಿ ಪೋಲೀಸ್ ಠಾಣೆಯ ಪಿ.ಎಸ್.ಐ ಆಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ದಿಃ*01.11.2019* ರಂದು ಸಂಜೆ *5.30* ಗಂಟೆ ಸಮಯದಲ್ಲಿ ನಾನು ನಂಜನಗೂಡು ಪಟ್ಟಣದ ಅಪೋಲೋ ಸರ್ಕಲ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಾ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡುತ್ತಿದ್ದೆ ಆ ಕಾಲಕ್ಕೆ ನನ್ನೊಂದಿಗೆ ಪಿ.ಸಿ*-563* ಕೀರ್ತಿ, ಹೋಂ ಗಾರ್ಡ್*-545* ರವಿ ಕುಮಾರ್ ಹಾಜರಿದ್ದರು. ಆ ಕಾಲಕ್ಕೆ ನಂಜನಗೂಡು ದೇವಸ್ಥಾನದ ಕಡೆಯಿಂದ ಬಂದ ಒಂದು ಕಾರು ಆ ಸ್ಥಳಕ್ಕೆ ಬಂದಾಗ ವಾಹನದ ಚಾಲಕ ಸೀಟ್ ಬೆಲ್ಟ್ ಹಾಕದೇ ಇದುದ್ದರಿಂದ ಆ ವಾಹನ ನಿಲ್ಲಿಸುವಂತೆ ಕೈ ತೋರಿಸಿ ನಿಲ್ಲಿಸಿದ್ದೆ. ಆ ಕಾಲಕ್ಕೆ ಚಾಲಕ ಕಾರಿನಿಂದ ಕೆಳಕ್ಕೆ ಇಳಿದು ಬಂದಿರಲಿಲ್ಲ. ಆಗ ನಾನು ಆ ಚಾಲಕನಿಗೆ ಸೀಟ್ ಬೆಲ್ಟ್ ಹಾಕದೇ ಇದುದ್ದರಿಂದ *500/-* ದಂಡ ಕಟ್ಟಬೇಕು ಎಂದು ತಿಳಿಸಿದ್ದೆ.

ಆಗ ಆ ಚಾಲಕ ಯಾಕೆ ದಂಡ ಕಟ್ಟಬೇಕು ಎಂದು ನಿರಾಕರಿಸಿದ್ದ. ಆತನ ಹೆಸರು ಮತ್ತು ವಿಳಾಸ ಕೇಳಿದಾಗ ಹೇಳಲು ನಿರಾಕರಿಸಿದ್ದ. ಆಗ ನಾನು ಆತನಿಗೆ *500/-* ದಂಡ ಕಟ್ಟಬೇಕು ಇದು ಸುಪ್ರೀಂ ಕೋರ್ಟ್ ಅದೇಶ ಎಂದು ಹೇಳಿದ್ದೆ. ಆಗ ನಾನು ರಶೀದಿಯಲ್ಲಿ ದಂಡದ ಬಗ್ಗೆ ಬರೆಯಲು ಹೋದಾಗ ಚಾಲಕನು ಯಾವ ದಂಡ ಕಟ್ಟುವುದು ಎಂದು ಏರುಧ್ವನಿಯಲ್ಲಿ ಮಾತನಾಡಿ ನಾನು ಕಾರಿನ ಮುಂದೆ ನಿಂತಿದ್ದರು ಸಹ ಕಾರನ್ನು ಚಾಲನೆ ಮಾಡಿ ಮುಂದಕ್ಕೆ ಚಲಿಸಿದ್ದ ಆಗ ಪಿ.ಸಿ*-563* ಕೀರ್ತಿ, ಹೋಂ ಗಾರ್ಡ್*-545* ರವಿ ಕುಮಾರ್ ಇವರು ಈ ರೀತಿ ಚಾಲನೆ ಮಾಡಿದರೆ ಅಪಘಾತ ಆಗುತ್ತದೆ ಎಂದು ಹೇಳಿದ್ದರು ಸಹ ಆ ವ್ಯಕ್ತಿ ಕಾರಿನಿಂದ ಕೆಳಗೆ ಇಳಿಯದೆ ಕಾರನ್ನು ನನ್ನ ಮೇಲೆ ಬಿಡಲು ಪ್ರಯತ್ನ ಮಾಡಿದ್ದ. ನಂತರ ಕಾರಿನಿಂದ ಕೆಳಗೆ ಇಳಿದು ಬಂದು ನೀನು ಒಬ್ಬ ರಾಕ್ಷಸಿ, ನೀನು ಒಬ್ಬ ಭಿಕ್ಷುಕಿ, ನೀವುಗಳು ದಿನನಿತ್ಯ ಹಗಲು ದರೋಡೆ ಮಾಡಲು ನಿಂತಿದ್ದೀಯಾ ಎಂದು ಇತ್ಯಾದಿಯಾಗಿ ಅವಾಚ್ಯವಾಗಿ ಬೈದು ನನಗೆ ಮಾನಹಾನಿ ಉಂಟುಮಾಡಿದ್ದಾನೆ. ನಾನು ಸದರಿ ವ್ಯಕ್ತಿಗೆ ನೀವು ದಂಡದ ಹಣ ಕಟ್ಟಿ ರಶೀದಿ ಪಡೆಯಬೇಕು ಎಂದು ತಿಳಿಸಬೇಕು ಎಂದು ಹೇಳಿದಾಗ ಯಾವ ದಂಡ ಕಟ್ಟುವುದು ಎಂದು ಏರುಧ್ವನಿಯಲ್ಲಿ ಮಾತನಾಡಿ ಕಾರಿನಿಂದ ಕೆಳಕ್ಕೆ ಇಳಿದು ಬಂದು ರಶೀದಿ ಪುಸ್ತಕ ಕಿತ್ತುಕೊಳ್ಳಲು ಪ್ರಯತ್ನಪುಟ್ಟ ನನ್ನ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾನೆ. ನಂತರ ನಾನು ನೀವು ಹೀಗೆ ಮಾಡುವುದು ತಪ್ಪು ಎಂದು ತಿಳಿಸಿದಾಗ ಆ ವ್ಯಕ್ತಿ ನೀನು ಯಾವ ಸೀಮೆ ಪೋಲೀಸ್ ಎಂದು ಗಲಾಟೆ ಮಾಡಿ ನನ್ನ ಹೆಸರು ಸುನೀಲ್ ಕುಮಾರ್ ಬಿನ್ ಚಾಮರಾಜು, ಬೆಂಗಳೂರು ಎಂದು ತಿಳಿಸಿದ್ದ. ಆಗ ನಾನು ಆತನಿಗೆ *500/-* ದಂಡ ಕಟ್ಟಿ ಹೊಗುವಂತೆ ತಿಳಿಸಿದ್ದೆ ಆಗ ಆ ವ್ಯಕ್ತಿ *500/-* ರೂಪಾಯಿ ಎಸೆದು ರಶೀದಿ ಪುಸ್ತಕಕ್ಕೆ ಸಹಿ ಹಾಕುವಂತೆ ತಿಳಿಸಿದಾಗ ನಿರಾಕರಿಸಿ ನಂತರ ಸಹಿ ಹಾಕದೇ ಇದ್ದರೇ ಅಪರಾಧ

ಆಗುತ್ತದೆ ಎಂದು ಹೇಳಿದಾಗ ಬೇಕಾಬಿಟ್ಟಿಯಾಗಿ ಸಹಿ ಮಾಡಿ ನಿನಗೆ ಒಂದು ಗತಿ ಕಾಣಿಸಬೇಕು ಎಂದು ಬೆದರಿಸಿ ನನ್ನೊಬ್ಬ ಮಹಿಳಾ ಅಧಿಕಾರಿಯಾಗಿದ್ದರು ಸಹ ನನ್ನನ್ನು ತಳ್ಳಿ ಹೊರಟುಹೊಗಿದ್ದ. ಆ ವ್ಯಕ್ತಿ ಚಲಾಯಿಸುತ್ತಿದ್ದ ಕಾರ್ ಸಂಖ್ಯೆ ಕೆಎ-*41*-ಎಂ.ಸಿ-*4591* ಇದ್ದು ಕಾರಿನಲ್ಲಿ ಇನ್ನೊಬ್ಬ ವ್ಯಕ್ತಿ ಸಹ ಇದ್ದ. ಆ ಘಟನೆ ಕಾಲಕ್ಕೆ ಘಟನೆ ಸ್ಥಳದಲ್ಲಿ ಟೀ ಅಂಗಡಿ ಮಾಲೀಕರಾದ ಸ್ವಾಮಿ ಮತ್ತು ಅಜ್ಮದ್ ಸಹ ಹಾಜರಿದ್ದರು. ಆ ಘಟನೆ ದೃಶ್ಯವನ್ನು ಯಾರೋ ಒಬ್ಬ ವ್ಯಕ್ತಿ ಮೊಬೈಲ್ ನಲ್ಲಿ ಸೆರೆ ಹಿಡಿದಿದ್ದ ಬಗ್ಗೆ ತಿಳಿದು ಬಂದಿತ್ತು.

*2.* ನಂತರ ನಾನು ಇಲಾಖಾ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ತಡವಾಗಿ ದಿಃ*02.11.2019* ರಂದು ದೂರು ನೀಡಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*6* ನಾನು ಕೊಟ್ಟಿದ್ದ ದೂರು ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*6(*ಬಿ*)* ಎಂದು ಗುರುತಿಸಿದೆ. ಆ ದಿನ ನಾನು ಕಾರಿನಲ್ಲಿದ್ದ ಇನ್ನೊಬ್ಬ ವ್ಯಕ್ತಿ ಯಾರೆಂದು ವಿಚಾರಿಸಿದಾಗ ಅವರು ಹೇಳಿರಲಿಲ್ಲ. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ದಿನ ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ವ್ಯಕ್ತಿ ಇರುತ್ತಾನೆ. ನಂತರ ದಿಃ*02.11.2019* ರಂದು ಸಂಜೆ *5.15* ರಿಂದ *6* ಗಂಟೆವರೆಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ತನಿಖಾಧಿಕಾರಿಯಾಗಿದ್ದ ಹೆಚ್.ಸಿ-*321* ಮಹದೇವಯ್ಯ ಇವರಿಗೆ ಕೃತ್ಯ ನಡೆದ ಸ್ಥಳವನುನ ತೊರಿಸಿದ್ದೆ. ಆ ಕಾಲಕ್ಕೆ ಅವರು ಪಂಚನಾಮೆ ಮಾಡಿದ್ದು ಅದರಲ್ಲಿ ನಾನು ಸಹಿ ಮಾಡಿದ್ದೆ. ನಿ.ಪಿ-*8* ಆ ಪಂಚನಾಮೆ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*8(*ಬಿ*)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿ.ಪಿ-*2* ರಿಂದ *4* ಎಂದು ಗುರುತಿಸಿರುವ ಪೊಟೋದಲ್ಲಿ ಕಾಣುವ ಕಾರು ಆ ದಿನ ನಾನು ನಿಲ್ಲಿಸಿದ್ದ ಕಾರು ಇದೆ. ನಂತರ ದಿಃ*06.11.2019* ರಂದು ಆ ಘಟನೆ ಕಾಲಕ್ಕೆ ಕಾರಿನಲ್ಲಿ ಆರೋಪಿತನ ಮನೆಯ ಹೆಂಗಸರುಗಳು

ಮತ್ತು ಒಬ್ಬ ಗಂಡಸು ಇದ್ದು ಅವರು ಯಾರು ಸಹ ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಮತ್ತು ಗಲಾಟೆ ಮಾಡಿಲ್ಲ ಎಂದು ನನ್ನ ಮರುಹೇಳಿಕೆ ಕೊಟ್ಟಿದ್ದೆ. ತನಿಖೆ ಕಾಲಕ್ಕೆ ಆರೋಪಿ ಸಹಿ ಮಾಡಿದ್ದ ರಶೀದಿ ಪುಸ್ತಕವನ್ನು ಹಾಜರುಪಡಿಸಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ಆ ಘಟನೆ ದಿನ ಕರ್ತವ್ಯಕ್ಕೆ ಹಾಜರಾಗಿದ್ದ ಕುರಿತು ಠಾಣಾ ದಿನಚರಿಯ ಪ್ರತಿ ಇದೆ. ಸದರಿ ದಾಖಲೆಯನ್ನು ನಿ.ಪಿ–*10* ಎಂದು ಗುರುತಿಸಿದೆ. ಆ ದಿನ ಪಿ.ಸಿ–***563*** ಮತ್ತು ***189*** ಇವರಿಗೆ ಅರವಟ್ಟಿಗೆ ಕೊಪ್ಪಲು ಗ್ರಾಮಕ್ಕೆ ಕರ್ತವ್ಯಕ್ಕೆ ನೇಮಿಸಿದ್ದು ನಂತರ ಹಿರಿಯ ಅಧಿಕಾರಿಗಳ ಸೂಚನೆಯಂತೆ ಅವರಿಗೆ ಆ ದಿನ ಅರವಟ್ಟಿಗೆ ಕೊಪ್ಪಲು ಗ್ರಾಮಕ್ಕೆ ಕರ್ತವ್ಯಕ್ಕೆ ಹೊಗುವುದ ಬೇಡ ನಾಳೆ ಹೋಗಿ ಎಂದು ತಿಳಿಸಿದ್ದೆ ಮತ್ತು ಅವರನ್ನು ನನ್ನೊಂದಿಗೆ ಕರೆದುಕೊಂಡು ಹೋಗಿದ್ದೆ. ಠಾಣಾ ದಿನಚರಿಯಲ್ಲಿ ಪೇದೆ ಸಂಖ್ಯೆ ***563*** ಎಂದು ನಮೂದಾಗುವುದರ ಬದಲಾಗಿ ಪೇದೆ ಸಂಖ್ಯೆ ***513*** ಎಂದು ನಮೂದಾಗಿದೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಜೆ.ಎಸ್.ಎನ್ ರವರಿಂದಃ-</u>

***3.*** ಒಂದು ದಿನ ತಡವಾಗಿ ದೂರು ಕೊಟ್ಟಿದ್ದೇನೆ ಎಂದರೆ ನಿಜ. ದೂರು ಕೊಡುವ ಮೊದಲು ಮೇಲಾಧಿಕಾರಿಗಳಿಗೆ ಮೌಖಿಕವಾಗಿ ತಿಳಿಸಿದ್ದೆ. ಆಗ ಮೇಲಾಧಿಕಾರಿಗಳು ದೂರು ಕೊಡುವಂತೆ ಮೌಖಿಕವಾಗಿ ತಿಳಿಸಿದ್ದರು ಆದರೆ ಲಿಖಿತವಾಗಿ ನೀಡಿಲ್ಲ. ನಾನು ಮೇಲಾಧಿಕಾರಿಗಳ ಬಳಿ ಹೋಗಿಲ್ಲ ಮತ್ತು ವಿಷಯ ತಿಳಿಸಿಲ್ಲ ಎಂದರೆ ಸರಿಯಲ್ಲ. ಆ ಘಟನೆ ಕಾಲಕ್ಕೆ ಘಟನೆ ಸ್ಥಳದಲ್ಲಿದ್ದಾಗ ನಂಜನಗೂಡು ಪೋಲೀಸ್ ಠಾಣೆಗೆ ಆ ಬಗ್ಗೆ ತಿಳಿಸಿರಲಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ಆ ಕಾಲಕ್ಕೆ ನಾನು ನಂಜನಗೂಡು ಪಟ್ಟಣ ಪೋಲೀಸ್ ಠಾಣೆಗೆ ತಿಳಿಸಿದಾಗ ಅಲ್ಲಿಂದ ಇಬ್ಬರು ಪೇದೆಗಳು ಬಂದಿದ್ದರು. ಆದರೆ ಆ ಬಗ್ಗೆ ದೂರಿನಲ್ಲಿ ಬರೆದಿಲ್ಲ. ನಾನು ನಂಜನಗೂಡು ಪಟ್ಟಣ ಪೋಲೀಸ್ ಠಾಣೆಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಆ ಘಟನೆ ಬಗ್ಗೆ

ನಮ್ಮ ಠಾಣಾ ದಿನಚರಿಯಲ್ಲಿ ನಾನೇ ನಮೂದಿಸಿದ್ದೆ. ಘಟನೆ ಸ್ಥಳದಿಂದ ನಮ್ಮ ಠಾಣೆಗೆ ಆ ಬಗ್ಗೆ ಫೋನ್ ಮಾಡಿ ತಿಳಿಸಿರಲಿಲ್ಲ. ಠಾಣಾ ದಿನಚರಿಯಲ್ಲಿ ಕಾರ್ ಚಾಲಕ ಕಾರಿನಿಂದ ಕೆಳಗೆ ಇಳಿಯದೇ ಕಾರನ್ನು ಮುಂದೆಕ್ಕೆ ಚಲಾಯಿಸಿ ನನ್ನ ಮೇಲೆ ಬಿಡಲು ಪ್ರಯತ್ನ ಮಾಡಿದ ಬಗ್ಗೆ ಮತ್ತು ನನ್ನ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಬಗ್ಗೆ ನಮೂದು ಇಲ್ಲ. ನನ್ನನ್ನು ನೂಕಾಡಿದ ಬಗ್ಗೆ ಸಹ ಠಾಣಾ ದಿನಚರಿಯಲ್ಲಿ ನಮೂದು ಇಲ್ಲ ಎಂದರೆ ನಿಜ. ನನಗೆ ಭಿಕ್ಷುಕಿ ಮತ್ತು ರಾಕ್ಷಸಿ ಎಂದು ಬೈದ ಬಗ್ಗೆ ನಮೂದು ಇಲ್ಲ ಎಂದರೆ ನಿಜ. ಆರೋಪಿ ಆ ರೀತಿ ಬೈದಿಲ್ಲ ಮತ್ತು ನನ್ನ ಮೇಲೆ ಕಾರು ಹತ್ತಿಸುವ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾಲಕ್ಕೆ ವಾಹನಗಳನ್ನು ನಿಲ್ಲಿಸಲು ನಾವು ಬ್ಯಾರಿಕೇಡ್ ಅಳವಡಿಸಿರಲಿಲ್ಲ. ಕಾರು ಬಂದಾಗ ನಾನು ಮತ್ತು ಸಿಬ್ಬಂದಿಗಳಾದ ಕೀರ್ತಿ ಮತ್ತು ರವಿ ಕುಮಾರ್ ಒಟ್ಟಿಗೆ ನಿಂತಿದ್ದೆವು. ಆರೋಪಿ *500/-* ರೂಪಾಯಿ ದಂಡ ಕಟ್ಟಿದ ಬಗ್ಗೆ ರಶೀದಿ ಪುಸ್ತಕವನ್ನು ತನಿಖಾಧಿಕಾರಿ ಮುಂದೆ ಹಾಜರುಪಡಿಸಿದ್ದೇವೆ. ಅದನ್ನು ಹಾಜರುಪಡಿಸಿದ ಬಗ್ಗೆ ದೂರಿನಲ್ಲಿ ನಮೂದು ಇಲ್ಲ. ಆ ದಿನ ಆರೋಪಿಗೆ *500/-* ರೂಪಾಯಿ ದಂಡ ಹಾಕಿಲ್ಲ ಮತ್ತು ಆ ಬಗ್ಗೆ ರಶೀದಿ ಬರೆದಿಲ್ಲ ಎಂದರೆ ಸರಿಯಲ್ಲ. ಅಜಾಗರೂಕತೆಯಿಂದ ಚಾಲನೆ ಮಾಡಿದರೆ ಅದಕ್ಕೂ ಸಹ ದಂಡ ಹಾಕುತ್ತೇವೆ ಎಂದರೆ ನಿಜ. ಆ ದಿನ ಆರೋಪಿಗೆ ಅಜಾಗರೂಕತೆಯಿಂದ ಚಾಲನೆ ಮಾಡಿದ್ದಕ್ಕೆ ಪ್ರತ್ಯೇಕ ದಂಡ ಹಾಕಿಲ್ಲ. ಅ ದಿನ ಆರೋಪಿತ ಅಜಾಗರೂಕತೆಯಿಂದ ಚಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತ ನನ್ನನ್ನು ತಳ್ಳಿ ಹೋಗಿಲ್ಲ ಎಂದರೆ ಸರಿಯಲ್ಲ. ಚಾ.ಸಾ-*5* ಮತ್ತು *6* ನನ್ನ ಪರಿಚಯದವರು ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ನನಗೆ ಪ್ರತ್ಯೇಕ ನೋಟಿಸ್ ಕೊಟ್ಟಿಲ್ಲ. ಮಹಜರ್ ನಲ್ಲಿ ಆರೋಪಿಯ ಹೆಸರು ಮತ್ತು ವಾಹನ ಸಂಖ್ಯೆ ನಮೂದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ

ತನಿಖಾಧಿಕಾರಿಯನ್ನು ಕೇಳಿ. ಮಹಜರ್ ನಲ್ಲಿನ ವಿಷಯಗಳನ್ನು ನಾನು ಹೇಳಿ ಬರೆಸಿಲ್ಲ. ಮಹಜರ್ ಅನ್ನು ಠಾಣೆಯಲ್ಲೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದೂರಿನಲ್ಲಿ ಇಬ್ಬರು ತೊಂದರೆ ಕೊಟ್ಟಿದ್ದಾರೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಆ ದಿನ ಆ ವಾಹನದಲ್ಲಿ ಆರೋಪಿತನ ಹೆಂಡತಿ ಮತ್ತು ಮಕ್ಕಳು ಸಹ ಇದ್ದರು ಎಂದರೆ ನಿಜ. ಆರೋಪಿತನ ಹೆಂಡತಿ ಮತ್ತು ಮ್ಕಕಳು ಇದುದ್ದರಿಂದ ಬೇರೆ ಹೆಂಗಸಿನ ಬಗ್ಗೆ ಆ ರೀತಿ ಮಾತನಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆ ದಿನ ಪಿಸಿ-***563*** ನನ್ನೊಂದಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ದೂರಿನಲ್ಲಿ ಹೇಳಿರುವಂತೆ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನೇ ದುರ್ನಡತೆಯಿಂದ ನಡೆದುಕೊಂಡು ಯಾರೋ ವಿಡಿಯೋ ರೆಕಾರ್ಡ್ ಮಾಡಿಕೊಂಡಿದ್ದರಿಂದ ಇಲಾಖಾ ವಿಚಾರಣೆಯಿಂದ ತಪ್ಪಿಸಿಕೊಳ್ಳಲು ಆರೋಪಿ ವಿರುದ್ದ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***